ಶ್ರೀ ಬಿ. ಎಂ. ಪಾಟೀಲ್.—ಈಗಾಗಲೇ ಮಾನ್ಯ ಸಭೆಯಲ್ಲಿ ಹೇಳಿದಂತೆ ಸರಕಾರ ಯೂನಿ ಫಾರಂ ಕಾರ್ಪೊರೇಷನ್ ಆಕ್ಟ್ ತರಬೇಕೆಂದು ಇದೆ. ಆದನ್ನು ತಂದರೆ ಸೂಕ್ತ ಸಮಯದಲ್ಲಿ ಯಾವ ಯಾವ ಕಡೆ ಕಾರ್ಪೊರೇಷನ್‌ಗಳು ಹಾಗೂ ಮುನಿಸಿಪಾಲಿಟಿಗಳನ್ನು ಮಾಡಬೇಕೆಂದು ಇದೆಯೋ ಅವನ್ನು ಯೋಜನೆ ಮಾಡಲಾಗುತ್ತದೆ.

ಶ್ರೀ ಕೆ. ಹೆಚ್. ತಮ್ಮಯ್ಯ.—ಭದ್ರಾವತಿಯಲ್ಲಿರುವ ಮುನಿಸಿಪಾಲಿಟಿ ಆದಾಯ ಕಡಿಮೆ ಎಂದರೆ ಇಲ್ಲಿ ಸ್ಯಾನಿಟರಿ ಬೋರ್ಡು ಬೇರೆ ಇದೆ. ಇದನ್ನೂ ಮುನಿಸಿಪಾಲಿಟಿಗೇ ಸೇರಿಸಿದರೆ ಆದಾಯ ಇನ್ನೂ ಜಾಸ್ತಿಯಾಗುತ್ತದೆ. ಆದುದರಿಂದ ಇದನ್ನು ಸೇರಿಸಿ ಇಲ್ಲಿ ಕಾರ್ಪೊರೇಷನ್ ಮಾಡಲು ಸರಕಾರ ಪರಿಶೀಲಿಸುತ್ತದೆಯೇ ?

ಶ್ರೀ ಬಿ. ಎಂ. ಪಾಟೀಲ್.—ಕಾರ್ಪೊರೇಷನ್ ಮಾಡಲಕ್ಕೆ ಅರ್ಹತೆ ಇಲ್ಲ ಎಂದು ನಾನು ಹೇಳಲಿಲ್ಲ. ಯೂನಿಫಾರಂ ಕಾರ್ಪೊರೇಷನ್ ಆಕ್ಟ್ ಬಂದ ಮೇಲೆ ಕೂಲಂಕಷವಾಗಿ ಪರಿಶೀಲಿಸಿ, ಎಲ್ಲೆಲ್ಲಿ ಕಾರ್ಪೊರೇಷನ್ ಮಾಡಬೇಕು ಎನ್ನುವುದನ್ನು ಸೂಕ್ತ ಸಮಯದಲ್ಲಿ ಪರಿಶೀಲನೆ ಮಾಡುತ್ತೇವೆ.

ಶ್ರೀ ಎಸ್. ಬಂಗಾರಪ್ಪ.—ಶಿವಮೊಗ್ಗ ಹಾಗೂ ಭದ್ರಾವತಿಗಳ ಮಧ್ಯದಲ್ಲಿ ಕೇವಲ ನಾಲ್ಕು ಮೈಲಿಗಳು ಮಾತ್ರ ಉಳಿದಿವೆ. ಏಕೆಂದರೆ ಇಂಡಸ್ಟ್ರಿಯಲ್ ಎಸ್ಟೇಟುಗಳು ಆಗಿವೆ. ಇದು ದೊಡ್ಡ ಇಂಡಸ್ಟ್ರಿ ಏರಿಯಾ ಆಗಿರುವುದರಿಂದ ಇಲ್ಲಿ ಕಾರ್ಪೊರೇಷನ್ ಮಾಡುವ ಬಗ್ಗೆ ಸರಕಾರ ಪರಿಶೀಲನೆ ಮಾಡುತ್ತಾರೆಯೇ ?

ಶ್ರೀ ಬಿ. ಎಂ. ಪಾಟೀಲ್.—ಮಾನ್ಯ ಸದಸ್ಯರಿಗೆ ಈಗಾಗಲೇ ಉತ್ತರ ಹೇಳಿದ್ದೇನೆ ; ಕೂಡಲೇ ಅದನ್ನು ಮಾಡುವುದಕ್ಕಾಗುವುದಿಲ್ಲ ಎಂದು. ಆದರೆ ಅರ್ಹತೆ ಇಲ್ಲವೆಂದು ಸರಕಾರದ ಅಭಿಪ್ರಾಯ ಇಲ್ಲ. ಅಲ್ಲಿ ಉದ್ಯೋಗಗಳು ಬೆಳೆಯುತ್ತಾ ಇದೆ, ಅದನ್ನು ಕಾರ್ಪೊರೇಷನ್ ಆಗಿ ಮಾಡುವ ಅಭಿಪ್ರಾಯ ಸರಕಾರಕ್ಕೆ ಇದೆ ಮತ್ತು ಮಾನ್ಯ ಸದಸ್ಯರ ಅಭಿಪ್ರಾಯವನ್ನೂ ಕೂಡ ಗಮನದಲ್ಲಿಟ್ಟು ಕೊಂಡು ಸೂಕ್ತ ಸಮಯ ಬಂದಾಗ ಪರಿಶೀಲನೆಗೆ ತಗೆದುಕೊಳ್ಳುತ್ತೇವೆ.

ಶ್ರೀ ಎ. ಆರ್. ಬದರೀನಾರಾಯಣ್.—ಕಾರ್ಪೊರೇಷನ್ ಆಗುವುದಕ್ಕೆ ಸಾಕಾದಷ್ಟು ಲಕ್ಷಣ ಗಳು ಇದ್ದು ಶಿವಮೊಗ್ಗ-ಭದ್ರಾವತಿ ಎರಡೂ ನಗರಗಳು ರೆಸೆಲ್ಯೂಷನ್ ಮಾಡಿ ಕಳುಹಿಸಿದರೆ ಆ ಪ್ರಪೋಸಲ್ಸ್‌ನ್ನು ತಾವು ಕನ್ಸಿಡರ್ ಮಾಡುತ್ತೀರಾ ?

ಶ್ರೀ ಬಿ. ಎಂ. ಪಾಟೀಲ್.—ಈಗಾಗಲೇ ಉತ್ತರ ಹೇಳಿದ್ದೇನೆ. ಸೂಕ್ತ ಸಮಯ ಬಂದಾಗ ಮುನಿಸಿಪರ್ ಕೌನ್ಸಿಲ್ಸ್ ರೆಸಲ್ಯೂಷನ್ ಮಾಡಿ ಕಳುಹಿಸಿದಾಗ ಸರ್ಕಾರ ಪರಿಶೀಲಿಸುತ್ತದೆ.

Kidnapping of a Member of Municipal Council, Davangere

846. Sri VATAL NAGARAJ (Chickpet).—

Will the Chief Minister be pleased to state :—

(*a*) whether it is a fact that at the time of President's Election to Davanagere City Municipality Sri Venugopal, Sub-Inspector of Davangere kidnapped Sri Venkatesh, a member of the Municipal Council ;

(*b*) whether Sri Venkatesh has informed them about this ;

(*c*) the action they have taken ?

Sri VEERENDRA PATIL (Chief Minister).—

(*a*) No.

(*b*) Yes.

(c) An enquiry was conducted and the enquiry revealed that the allegations were baseless.

ಶ್ರೀ ವಾಟಾಳ್ ನಾಗರಾಜ್.—ಸ್ವಾಮಿ, ಶ್ರೀ ವೇಣುಗೋಪಾಲ್ ಸಬ್-ಇನ್‌ಸ್ಪೆಕ್ಟರನ್ನು ಎಷ್ಟು ವರ್ಷದಿಂದ ದಾವಣಗೆರೆಯಲ್ಲಿ ಇಟ್ಟಿದ್ದೀರಿ ? ಒಬ್ಬೊಬ್ಬ ಸಬ್ ಇನ್‌ಸ್ಪೆಕ್ಟರ್ ಒಂದೊಂದು ಪ್ರದೇಶದಲ್ಲಿ ಎಷ್ಟೆಷ್ಟು ವರ್ಷ ಇರಬೇಕು ಎನ್ನುವ ನೀತಿ ಇದೆಯೇ ?

ಅಧ್ಯಕ್ಷರು.—ಇದು ಕಿಡ್‌ನ್ಯಾಪಿಂಗ್ ಸಂಬಂಧಪಟ್ಟ ಪ್ರಶ್ನೆ. ಮಾನ್ಯ ಸದಸ್ಯರು, ಕೇಳುವ ಪ್ರಶ್ನೆಯೇ ಬೇರೆ.

ಶ್ರೀ ವಾಟಾಳ್ ನಾಗರಾಜ್.—ಸ್ವಾಮಿ, 9 ವರ್ಷದಿಂದಲೂ ವೇಣುಗೋಪಾಲ್ ಸಬ್ ಇನ್‌ಸ್ಪೆಕ್ಟರ್ ದಾವಣಗೆರೆಯಲ್ಲೇ ಇರುವುದರಿಂದ ಈ ರೀತಿ ದುಷ್ಪರಿಣಾಮವಾಗಿ ಅಲ್ಲಿನ ನಗರ ಸಭಾ ಉಪಾಧ್ಯಕ್ಷರನ್ನು ಕಿಡ್‌ನ್ಯಾಪ್ ಮಾಡಿರುವುದು ನಿಜವೇ ?

† ಶ್ರೀ ವೀರೇಂದ್ರ ಪಾಟೀಲ್.—ನಿಜವಲ್ಲ.

ಶ್ರೀ ವಾಟಾಳ್ ನಾಗರಾಜ್. —ನರ್ಕಾರಕ್ಕೆ ನನ್ನನ್ನು ಕಿಡ್‌ನ್ಯಾಪ್ ಮಾಡಿದ್ದಾರೆಂದು ಶ್ರೀಮಾನ್ ವೆಂಕಟೇಶ್‌ರವರು ದೂರು ಕೊಟ್ಟಿದ್ದಾರೆ. ಆ ದೂರುಗಳು ಏನು ಆದುವು ?

ಶ್ರೀ ವೀರೇಂದ್ರ ಪಾಟೀಲ್. —ದೂರು ಬರುವ ಮುನ್ನ ಮಾನ್ಯ ವಾಟಾಳ್ ನಾಗರಾಜ್‌ರವರು ಆ ದೂರನ್ನೂ, ಇನ್ನೊಬ್ಬರನ್ನೂ ಕರೆದುಕೊಂಡು ಬಂದು ಇದು ಶ್ರೀಮಾನ್ ವೆಂಕಟೇಶ್‌ರವರ ಅರ್ಜಿ ಎಂದು ಕೊಟ್ಟರು. ನಾನು ಎನ್‌ಕ್ವೈರಿ ಮಾಡಿಸುತ್ತೇನೆ ಎಂದು ಹೇಳಿದೆ. ಆ ರೀತಿ ಎನ್‌ಕ್ವೈರಿ ಮಾಡಿಸಿದಾಗ ಅವರು ಹೇಳಿದಂಥ ಅಲಗೇಷನ್‌ನಲ್ಲಿ ಯಾವ ಸತ್ಯಾಂಶವೂ ಇರಲಿಲ್ಲ.

ಶ್ರೀ ವಾಟಾಳ್ ನಾಗರಾಜ್.—ಅವರು 9 ವರ್ಷದಿಂದಲೂ ಅಲ್ಲೇ ಇರುವುದರಿಂದ ಯಾವ ಕೇಸುಗಳು ಹಾಕಿದರೂ, ತನಿಖೆಗೆ ಹೋದರೆ ಅವರ ಮೇಲೆ ಏನು ರಾಜಿಯಾತು ಮಾಡುವುದಕ್ಕೂ ಆಗುವುದಿಲ್ಲ ಎನ್ನುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಅದು ನನ್ನ ಗಮನಕ್ಕೆ ಬಂದಿಲ್ಲ. ಅದನ್ನು ಸಿ.ಐ.ಡಿ.ಯವರು ಎನ್‌ಕ್ವೈರಿ ಮಾಡುತ್ತಾರೆ.

ಶ್ರೀ ಎಸ್. ಶಿವಪ್ಪ.—ಮುನಿಸಿಪಲ್ ಸದಸ್ಯರಾದ ಶ್ರೀಮಾನ್ ವೆಂಕಟೇಶ್ ಎಂಬುವರನ್ನು ಕಿಡ್‌ನ್ಯಾಪ್ ಮಾಡಿದ್ದಾರೆ ಎಂದು ಅರ್ಜಿ ಕೊಟ್ಟಿದ್ದಾರೆ. ಇದು ಅಲ್ಲಿಯ ಸ್ಥಳೀಯ ಪೋಲೀಸ್ ಅಧಿಕಾರಿಗಳ ಮುಖಾಂತರ ಎನ್‌ಕ್ವೈರಿ ಆಯಿತೇ ?

ಶ್ರೀ ವೀರೇಂದ್ರ ಪಾಟೀಲ್.—ಸಿ.ಐ.ಡಿ. ಮುಖಾಂತರ ಎನ್‌ಕ್ವೈರಿ ಮಾಡಿದ್ದಾರೆ.

Sri H. SIDDAVEERAPPA.—If that is not a confidential document, will the Chief Minister be pleased to place that enquiry report on the Table of this House ?

Sri VEERENDRA PATIL.—I cannot place the enquiry report on the Table of the House, It is for the satisfaction of Government, I got the report. According to the report I see that the allegations that have been made are not true.

Sri H. SIDDAVEERAPPA.—May I request the Chief Minister to cause a judicial enquiry to be made in this matter to find out whether the allegations are true or not and also in view of the fact that Mr. Venkatesh is the Vice-President of the Davangere City Mnnicipality ?

Sri VEERENDRA PATIL.— For anything and everything we cannot cause judicial enquiry to be made because there are certain norms for Government to order judicial enquiry and it is not that in all matters judicial enquiry can be ordered.

ಶ್ರೀ ರಾಮೇಗೌಡ.—ಸ್ವಾಮಿ, 9 ವರ್ಷದಿಂದಲೂ ಆ ಸಬ್ ಇನ್‌ಸ್ಪೆಕ್ಟರ್ ಅದೇ ಜಾಗದಲ್ಲಿ ಇರುವುದು ನಿಜ ಇದ್ದರೆ ಅದಕ್ಕೆ ಇರತಕ್ಕಂಥ ಕಾರಣ ಏನು ತಿಳಿಸುತ್ತೀರಾ ?

ಅಧ್ಯಕ್ಷರು.—ಇದು ಕಿಡ್‌ನ್ಯಾಪ್‌ಗೆ ಸಂಬಂಧಪಟ್ಟ ಪ್ರಶ್ನೆ.

Sri B. P. GANGADHAR.—Is it a fact that Mr. Venkatesh had complained that the Sub-Inspector of Police, Davangere, kidnapped him because of the pressure of the Congress people in that area ?

Sri VEERENDRA PATIL.—I do not have the application of Mr. Venkatesh. That is why it is very difficult for me to say what allegations were made.

ಶ್ರೀ ಎಂ. ಎನ್. ರಾಮಣ್ಣ.—ಶ್ರೀ ವೇಣುಗೋಪಾಲ್ ಎಂಬ ಸಬ್ ಇನ್‌ಸ್ಪೆಕ್ಟರನ್ನು ಬೇರೆ ಕಡೆಗೆ ವರ್ಗ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ವೀರೇಂದ್ರ ಪಾಟೀಲ್.—ಬಂದಿಲ್ಲ.

Sri S. SIVAPPA.—Mr. Venkatesh is the Vice-President of the Davangere City Municipality. When a person of the status of Vice-President of a big municipality gives a complaint in writing that he was kidnapped by a police officer, you say that on enquiry it is found that it is baseless. What will happen to the allegations made by such men in such high position ? To say that allegation is baseless, what is the type of enquiry that you should hold?

Sri VEERENDRA PATIL,—I do not want to go into the details of this case here because I have explained in detail in the other House when there was some adjournment motion or some calling attention motion. At that time facts and figures were given and with the documents that I had in my possession I explained the case in detail. Afterwards after some time I got a representation or petition saying that such and such a Sub-Inspector kidnapped such and such a person. When a person who is the Vice-President of the Davangere Municipality has made an allegation against one police officer, I thought that it should be referred to the C.I.D. The C.I.D. sent one Special Officer and the entire case was enquired into. After we got the report from the C.I.D. after necessary enquiry it was found that there was no truth in the allegation.

ಶ್ರೀ ಪಾಟಾಳ್ ನಾಗರಾಜ್.—ಶ್ರೀ ವೇಣುಗೋಪಾಲ್ ಅವರ ವರ್ತನೆ ಸರಿಯಾಗಿಲ್ಲ ಎಂದು ಶ್ರೀ ಎ. ಎಚ್. ಶಿವಾನಂದಸ್ವಾಮಿಯವರು ದೂರು ಕೊಟ್ಟಿಲ್ಲವೇ ? ದಾವಣಗೆರೆ ನಗರದಲ್ಲಿ ಅವರು ಇರುವುದರಿಂದ ಬಹಳ ತೊಂದರೆಯಾಗಿದೆ ಎಂದು ಶ್ರೀ ಶಿವಾನಂದಸ್ವಾಮಿಯವರು ದೂರು ಕೊಟ್ಟಿಲ್ಲವೇ ? ಆದರೂ ಕೂಡ ಆ ಸಬ್ ಇನ್‌ಸ್ಪೆಕ್ಟರನ್ನು ಅಲ್ಲಿಯೇ ಇಟ್ಟುಕೊಂಡಿರಲು ಕಾರಣವೇನು?

ಶ್ರೀ ವೀರೇಂದ್ರ ಪಾಟೀಲ್.—ಮಾನ್ಯ ಸದಸ್ಯರು ಕೇಳುವ ವಿಚಾರ ಬೇರೆ. ಶ್ರೀ ಶಿವಾನಂದ ಸ್ವಾಮಿಯವರು ನನ್ನ ಹತ್ತಿರ ಬಂದು ಒಂದು ಬರಹ ಮೂಲಕ ಒಂದು ಕಾಗದವನ್ನು ಕೊಟ್ಟಾಗ ಅದರಲ್ಲಿ ಕಿಡ್‌ನ್ಯಾಪ್ ಮಾಡಿರುವ ವಿಷಯವನ್ನು ಹೇಳಿಲ್ಲ. ಆ ಪೋಲೀಸ್ ಅಧಿಕಾರಿ ಬಹಳ ದಿವಸ ದಿಂದ ಇದ್ದಾರೆ, ಅದಕ್ಕಾಗಿ ಅವರನ್ನು ವರ್ಗ ಮಾಡಬೇಕು ಎಂದು ಷ್ಟೇ ಹೇಳಿದ್ದು. ನಾನು ವಿಚಾರಿಸುತ್ತೇನೆಂದು ಹೇಳಿ ಅವರನ್ನು ವರ್ಗ ಮಾಡುವುದಕ್ಕೆ ಒಂದು ಸೀಸನ್ ಇರುತ್ತದೆ. ಯಾವಾಗ ಬೇಕಾದರೂ ವರ್ಗ ಮಾಡಬೇಕಾದರೆ ಕಷ್ಟವಾಗುತ್ತದೆ. ಸಾಮಾನ್ಯವಾಗಿ ಏಪ್ರಿಲ್ ಮೇ ತಿಂಗಳಿ ನಲ್ಲಿ ವರ್ಗ ಮಾಡುವುದರಿಂದ ಅವರ ಮಕ್ಕಳಿಗೆ ವಿದ್ಯಾಭ್ಯಾಸಕ್ಕೆ ತೊಂದರೆಯಾಗುವುದಿಲ್ಲ ಯಾವಾಗ ಲೆಂದರೆ ಆವಾಗ ವರ್ಗ ಮಾಡುವುದಕ್ಕಾಗುವುದಿಲ್ಲ. ಅದರಲ್ಲಿ ಒಂದು ಸ್ಕೈಕಲ್ ಇರುತ್ತದೆ. ಏಳೆಂಟು ಜನರನ್ನು ಬದಲಾಯಿಸಬೇಕಾಗುತ್ತದೆ ಎನ್ನುವ ಮಾತನ್ನು ಹೇಳಿದ್ದೇನೆ. ಯಾರಾದರೂ ಒಬ್ಬ ಅಧಿಕಾರಿಯನ್ನು ವರ್ಗ ಮಾಡಿ ಎಂದ ತಕ್ಷಣ ಮಾಡುತ್ತ ಹೋದರೆ ಆಡಳಿತ ಯಾವ ರೀತಿಯಲ್ಲಿ ನಡೆಯಬೇಕು ಎನ್ನುವುದನ್ನೂ ಯೋಚನೆ ಮಾಡಬೇಕು.

2-00 P. M.

Sri H. SIDDAVEERAPPA.—Sir, may I know the intention of the Government in retaining this Sub-Inspector in the same place for several years in spite of hundreds of representations that have been made to the Government to transfer him from that place because of the troubles and other difficulties experienced by the people of that place?

Sri VEERENDRA PATIL.—Sir, hon. Member Sri Siddaveerappa says that Government has received hundreds of representations. I do not know anything about the representations that were received by my predecessor. After I took over, I have received only one representation, that too from an hon. Member of the other House Sri A. H. Shivanandaswamy, very recently, and I told the hon. Member that I do not know since how long he is there. Now that a representation is made, it will be considered at the time of general transfers.

Mr. SPEAKER.—Question Hour is over.

ಶ್ರೀಮತಿ ನಾಗರತ್ನಮ್ಮ ಹಿರೇಮಠ (ಗಾಂಧಿನಗರ).—ನಮ್ಮ ಪ್ರಶ್ನೆ ಸಭೆಯಲ್ಲಿ ಬಂದಾಗ ನಾವು ಇಲ್ಲವಿದ್ದರೆ ಅದು ಲ್ಯಾಪ್ಸ್ ಆಗುತ್ತದೆ. ನಾವಿದ್ದರೂ ಕೂಡ ಪ್ರಶ್ನೆ ಲ್ಯಾಪ್ಸ್ ಆದರೆ ನಮಗೆ ಬೇಕಾದ ಮಾಹಿತಿ ಸಿಕ್ಕುವುದು ಹೇಗೆ?

Mr. SPEAKER.—The complaint of the hon. lady member is right; I very much appreciate it.

QUESTIONS FOR ANSWERS ON THE DAY

(but not taken up)

Supply of Electricity to the Villages of Kalghatgi Taluk

625. Sri F. S. PATIL (Kalghatgi).—

Will the Chief Minister be pleased to state :—

(*a*) the number of villages in Kalghatgi Taluk that were surveyed during the period from 1959 to the end of 1963 in connection with the supply of electricity ;

(*b*) the names of villages which were supplied with electricity during the above said period ;

(*c*) the villages to which electricity has not yet been supplied even though survey work has been completed ;

(*d*) the villages to which supply of electricity was sanctioned in the Budget for the year 1967-68 and 1968-69 ;

(*e*) the villages that were included in the programme for 1967-68 and 1968-69 ;

(*f*) out of the villages so included the numbers and names of villages to which electricity has been supplied ;